# ***ಅನುಬಂಧ-4***

(ದಿನಾಂಕ: 03-09-2007ರ ಸರ್ಕಾರದ ಆದೇಶ ಸಂಖ್ಯೆ: ಇಡಿ 44 ಎಸ್ಎಲ್ಬಿ 2007(ಭಾಗ)ರ ಅನುಬಂಧ-4)

***ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತ್ಯಾದಿ) ನಿಯಮಗಳು, 2006ರಡಿ ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಮಾನ್ಯತೆ ನೀಡುವ (ಅಂದರೆ, ಪ್ರಥಮ ಮಾನ್ಯತೆ ನೀಡುವ ಅಥವಾ ಮಾನ್ಯತೆಯ ನವೀಕರಣ ಮಾಡುವ) ಸಲುವಾಗಿ ಪರಿಶೀಲಿಸಲು ಉಪಯೋಗಿಸತಕ್ಕ ಚೆಕ್ ಲಿಸ್ಟ್***

| ***ಕ್ರಮ ಸಂಖ್ಯೆ*** | ***ಅಂಶ / ಪ್ರಶ್ನೆ*** | ***ಉತ್ತರ/ಷರಾ*** |
|---|---|---|
| 1. | ಮಾನ್ಯತೆ ಕೋರಿದ ಸಂಸ್ಥೆಯ ಹೆಸರು ಮತ್ತು ವಿಳಾಸ; | |
| 2. | ಯಾವ ಪದವಿ ಪೂರ್ವ ಕಾಲೇಜಿಗಾಗಿ ಮಾನ್ಯತೆಯನ್ನು ಕೋರಲಾಗಿದೆಯೋ, ಆ ಪದವಿ ಪೂರ್ವ ಕಾಲೇಜಿನ ಹೆಸರು ಮತ್ತು ವಿಳಾಸ. | |
| 3. | 2006ರ ಸದರಿ ನಿಯಮಗಳ ನಿಯಮ 4ರ ಉಪ ನಿಯಮ (10)ರಂತೆ ಮಾನ್ಯತೆ ನೀಡಲು ಉದ್ದೇಶಿಸಿದ (ಕ್ರಮ ಸಂಖ್ಯೆ(1)ರಲ್ಲಿನ) ಪದವಿ ಪೂರ್ವ ಕಾಲೇಜನ್ನು ನೋಂದಾಯಿಸಬೇಕಾಗಿದೆ. ಅದರಂತೆ, ಅದನ್ನು ನೋಂದಾಯಿಸಲಾಗಿದೆಯೇ? | |
| 4. | 2006ರ ಸದರಿ ನಿಯಮಗಳ ನಿಯಮ 7ರ ಉಪ ನಿಯಮ (1)ರಂತೆ ಶಾಶ್ವತ ಮಾನ್ಯತೆ ಪಡೆಯಲು ಅರ್ಹವಾಗಲು ಕ್ರಮ ಸಂಖ್ಯೆ: (1)ರಲ್ಲಿನ ಪದವಿ ಪೂರ್ವ ಕಾಲೇಜು ಈ ಕೆಳಕಂಡ ಷರತ್ತುಗಳನ್ನು ಪೂರೈಸಿದೆಯೇ?<br>------------------------------------------<br>(i) ವರ್ಗ-ಎರಲ್ಲಿನ ಪದವಿ ಪೂರ್ವ ಕಾಲೇಜನ್ನಾಗಿ ಸತತವಾಗಿ 10 ವರ್ಷಗಳ ಅವಧಿಯನ್ನು ಪೂರೈಸಿದೆಯೇ?<br>------------------------------------------<br>(ii) ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಸದರಿ ಕಾಲೇಜು ಸಾಮೂಹಿಕವಾದ ಪರೀಕ್ಷಾ | <br><br><br><br><br>---------------------------<br><br><br><br>---------------------------<br> |

| | | |
|---|---|---|
| | ದುರ್ವ್ಯವಹಾರಗಳಲ್ಲಿ (mass examination malpractice) ತೊಡಗಿಸದೇ ಇದೆಯೇ? | |
| | ------------------------------------------- | ---------------------------- |
| | (iii) ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತ್ಯಾದಿ) ನಿಯಮಗಳು, 2006ರ ನಿಯಮ 11ರಂತೆ ವಿದ್ಯಾರ್ಥಿಗಳ ಸಂಖ್ಯಾಬಲ / ಹಾಜರಾತಿ ನಿರ್ವಹಿಸಲಾಗಿದೆಯೇ? ಅದನ್ನು ಈ ಕೆಳಗೆ ಉದ್ಧರಿಸಿದೆ:-<br>"11. Minimum student strength and sections,- (1) Student strength shall be the basis for determination of sections in a college. A section may comprise of not more than eighty students.<br>The Director shall determine, the number of sections that can be allowed to be formed in a college taking into consideration the student strength, the infra-structural facilities available in the college and requirement of the area. The managing committee and the principal shall not admit students beyond the limit of the sections so determined.<br>(2) A practical batch in a science subject shall have a minimum of twenty students unless the total number of students in the subject itself is less than that, in which case the entire section itself shall be the batch.<br>(3) Every Pre-University college may have upto three sections with three distinct combination of subjects during the first year of its commencement, but there shall be at least two distinct combinations. The minimum and maximum student | |

| | | |
|---|---|---|
| | strength for a Section shall be forty and eighty respectively. No Pre-University college shall be entitled to have a fourth combination of subjects in the second or the subsequent years unless the student strength in at least two such combinations of subjects exceeds forty. A fifth combination may be allowed only when the student strength in the first three combinations exceeds forty in each combination and so on and so forth. Additional sections in any approved combination shall not be allowed unless the student strength in the existing section exceeds hundred.<br>(4) A minimum of ten students shall be necessary in each of the languages taught in Part-1. If the student strength in any of the approved languages or optional subjects gets reduced below the prescribed student strength successively for three years then the college shall not admit students to the said language or optional subjects in the next academic year. Any admission made in violation of these rules shall be void, ab-initio and the students shall not be eligible to appear for the annual examinations.” | |
| 5. | ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಕಲಂ 36ರ ಉಪ ಕಲಂ(6)ರನ್ವಯ ತಾತ್ಕಾಲಿಕ ಮಾನ್ಯತೆ (provisional approval) ಪಡೆದ ಪದವಿ ಪೂರ್ವ ಕಾಲೇಜು ಆಗಿದೆಯೇ? ಆಗಿದ್ದಲ್ಲಿ, ಪ್ರತಿ ಸಲ ಮೂರು ವರ್ಷಕ್ಕೊಮ್ಮೆ ಅದನ್ನು ವಿಸ್ತರಿಸಲು, 2006ರ ಸದರಿ ನಿಯಮಗಳ ನಿಯಮ 7ರ ಉಪ ನಿಯಮ (2)ರಂತೆ ವಿಧಿಸಲಾದ ಈ ಕೆಳಕಂಡ ಷರತ್ತುಗಳನ್ನು | |

| | | |
|---|---|---|
| | ಪೂರೈಸಲಾಗಿದೆಯೇ?<br>(a) 2006ರ ಆ ನಿಯಮಗಳ ನಿಯಮ 4ರ ಉಪ ನಿಯಮ (2)ರಂತೆ ನಿಗದಿಪಡಿಸಲಾದ ಈ ಕೆಳಕಂಡ ಮೂಲಭೂತ ಸೌಲಭ್ಯಗಳನ್ನು ಆಡಳಿತ ಮಂಡಳಿ ಒದಗಿಸಿದೆಯೇ?<br>(i) ಕನಿಷ್ಠ 25,000 ಚದರ ಅಡಿಯ ಜಮೀನು;<br>(ii) ಈ ಸುತ್ತೋಲೆಗೆ ಲಗತ್ತಿಸಿದ ***<u>ಪಟ್ಟಿ-2</u>***ರಲ್ಲಿ ನಮೂದಿಸಲಾದ ಸೌಲಭ್ಯಗಳನ್ನು ಒಳಗೊಂಡ ಕನಿಷ್ಠ 8 ಅಡಿಗಳ ಉದ್ದ ವರೆಂಡವನ್ನು ಹೊಂದಿದ ಕಟ್ಟಡ;<br>------------------------------------------<br>(b) ನಿಯಮ 7ರ ಉಪ ನಿಯಮ (2)ರ ಖಂಡ (ಬಿ)ರಂತೆ ಆಡಳಿತ ಮಂಡಳಿ ಜಮೀನು ಮತ್ತು ಕಟ್ಟಡದ ಬಗ್ಗೆ ಮುಚ್ಚಳಿಕೆ ಪತ್ರ ನೀಡಿದೆಯೇ?<br>------------------------------------------<br>(c) ಹಿಂದಿನ ವರ್ಷದಲ್ಲಿ ಸದರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಸಾಮೂಹಿಕವಾಗಿ ಪರೀಕ್ಷಾ ದುರ್ವ್ಯವಹಾರಗಳಲ್ಲಿ (mass examination malpractice)ತೊಡಗಿಸದೇ ಇದ್ದಾರೆಯೇ?<br>------------------------------------------<br>(d) ಮಾನ್ಯತೆ ಪಡೆಯಲು/ನವೀಕರಿಸಲು ದಿನಾಂಕ 8-5-2007ರ ಸರ್ಕಾರದ ಆದೇಶ ಸಂಖ್ಯೆ: ಇಡಿ 17 ಟಿಪಿಯು 2007ರನ್ವಯ ನಿಗದಿಪಡಿಸಿದ ರೂ.10,000/-ದ ಶುಲ್ಕವನ್ನು ಕಾಲೇಜು ಸರ್ಕಾರದ ಖಜಾನೆಗೆ ಜಮಾ ಮಾಡಿದೆಯೇ?<br>------------------------------------------<br>(e) ವರ್ಗ-ಸಿಗೆ ಸೇರಿದ ಕಾಲೇಜಿಗೆ ಮಾನ್ಯತೆ ನೀಡತಕ್ಕದ್ದಲ್ಲ. ಸದರಿ ಕಾಲೇಜು ವರ್ಗ-ಸಿಗೆ ಸೇರಿದಲ್ಲವೆಂಬುದು ಖಚಿತವಾಗಿದೆಯೇ? | <br><br><br><br><br><br><br><br><br><br>---------------------------<br><br><br><br>---------------------------<br><br><br><br><br>---------------------------<br><br><br><br><br>--------------------------- |
| (6) | ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನ ಇಲ್ಲದ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ | |

| | | |
|---|---|---|
| | ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005ರ ನಿಯಮ 3ರಂತೆ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿನ ಆಯಾಯಾ ಹುದ್ದೆಗೆ ನೇಮಕಾತಿಗಾಗಿ ನಿಗದಿಪಡಿಸಲಾದ ವಿದ್ಯಾರ್ಹತೆಯೇ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಆಯಾಯಾ ಹುದ್ದೆಗೆ ನೇಮಕಾತಿಗಾಗಿ ನಿಗದಿಪಡಿಸಲಾದ ವಿದ್ಯಾರ್ಹತೆಯೇ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಆಯಾಯಾ ಹುದ್ದೆಗೆ ನೇಮಕಾತಿಗಾಗಿಯೂ ಅನ್ವಯವಾಗುತ್ತದೆ. ನೋಂದಾಯಿಸಲು ಉದ್ದೇಶಿಸಿದ ಖಾಸಗಿ ಶಾಲೆಯ / ಪದವಿ ಪೂರ್ವ ಕಾಲೇಜಿನ ನೌಕರರು ಅದರಂತೆ ನಿಗದಿತ ವಿದ್ಯಾರ್ಹತೆಯನ್ನು ಹೊಂದಿದ್ದಾರೆಯೇ? (ಆ ವಿದ್ಯಾರ್ಹತೆಯನ್ನು ಅವರು ಹೊಂದಿದ್ದಲ್ಲಿ ಮಾತ್ರ ಮಾನ್ಯತೆ ನವೀಕರಣಕ್ಕಾಗಿ ಅರ್ಹವಾಗುತ್ತದೆ); | |
| (7) | 2005ರ ಸದರಿ ನಿಯಮಗಳನ್ವಯ ಅನುದಾನ ಇಲ್ಲದ (unaided) ಶಿಕ್ಷಣ ಸಂಸ್ಥೆಗಳ ನೌಕರರಿಗೆ ಸಂಬಂಧಿಸಿದಂತೆ ನಿಗದಿಪಡಿಸಲಾದ ಈ ಕೆಳಕಂಡ ಸೇವಾ ಷರತ್ತುಗಳನ್ನು ಅದರ ನೌಕರರಿಗೆ ಲಭ್ಯಮಾಡಲಾಗಿದೆಯೇ? ಎಂಬುವುದನ್ನು ಪರಿಶೀಲಿಸಿ, ಅದನ್ನು ಲಭ್ಯ ಮಾಡಿದ್ದಲ್ಲಿ ಮಾತ್ರ ಮಾನ್ಯತೆ ನವೀಕರಣಕ್ಕಾಗಿ ಅರ್ಹವಾಗುತ್ತದೆ;<br>(ಅ) ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿನ ಆಯಾಯಾ ಹುದ್ದೆಗೆ ನೇಮಕಾತಿಗಾಗಿ ನಿಗದಿಪಡಿಸಲಾದ ವಿದ್ಯಾರ್ಹತೆಯೇ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಆಯಾಯಾ ಹುದ್ದೆಗೆ ನೇಮಕಾತಿಗಾಗಿಯೂ ಅನ್ವಯವಾಗುತ್ತದೆ. ನೋಂದಾಯಿಸಲು ಉದ್ದೇಶಿಸಿದ ಖಾಸಗಿ ಶಾಲೆಯ/ಪದವಿ ಪೂರ್ವ ಕಾಲೇಜಿನ ನೌಕರರು ಅದರಂತೆ ನಿಗದಿತ ವಿದ್ಯಾರ್ಹತೆಯನ್ನು ಹೊಂದಿದ್ದಾರೆಯೇ?<br>-------------------------------------------<br>(ಆ) ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿನ ಆಯಾಯಾ | <br><br><br><br><br>---------------------------- |

| | | |
|---|---|---|
| | ಹುದ್ದೆಗಳಿಗೆ ನಿಗದಿಪಡಿಸಲಾದ ವೇತನ ಶ್ರೇಣಿಯೇ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಆಯಾಯಾ ಹುದ್ದೆಗೆ ಅನ್ವಯವಾಗುತ್ತದೆ. ಆ ವೇತನ ಶ್ರೇಣಿಯ ಕನಿಷ್ಠ ಹಂತದಲ್ಲಿ ವೇತನವನ್ನು ನೀಡಲಾಗಿದೆಯೇ? ಹಾಗೂ ವೇತನದ ಮೊತ್ತವನ್ನು ಕ್ರಾಸ್ಡ್ ಚೆಕ್ ಮೂಲಕ ಸಂಬಂಧಿಸಿದ ನೌಕರನ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆಯೇ?<br>--------------------------------------------<br>(ಇ) ಸದರಿ ನಿಯಮಗಳ ನಿಯಮ 4ರಂತೆ ಸಂಬಂಧಿಸಿದ ನೌಕರನ ರಜಾ ಖಾತೆಯಲ್ಲಿ ರಜೆಯನ್ನು ಜಮಾ ಮಾಡಲಾಗಿದೆಯೇ?<br>--------------------------------------------<br>(ಈ) ಮಹಿಳಾ ನೌಕರರಿಗೆ ಸಮಬಂಧಿಸಿದಂತೆ, Maternity Benefits Act, 1961 (Central Act 53 of 1961)ರ ಪ್ರಕಾರ ಪ್ರಸೂತಿ ರಜೆ ನೀಡಲಾಗಿದೆಯೇ?<br>--------------------------------------------<br>(ಉ) ಸದರಿ ನಿಯಮಗಳ ನಿಯಮ 5ರಂತೆ ಲಿಖಿತ ನೇಮಕಾತಿ ಆದೇಶವನ್ನು ನೀಡಲಾಗಿದೆಯೇ? ಪ್ರತಿಯೊಬ್ಬ ನೌಕರನಿಗೆ ಸಂಬಂಧಿಸಿದಂತೆ ಸೇವಾ ಪುಸ್ತಕವನ್ನು ಹಾಗೂ Schedule of Employment, ಇವುಗಳನ್ನು ನಿರ್ವಹಿಸ ಲಾಗಿದೆಯೇ?<br><br>(ಊ) ಸದರಿ ನಿಯಮಗಳ ನಿಯಮ 6ರನ್ವಯ ನಿಷೇಧಿಸಿದಂತೆ, ನೇಮಕಾತಿಯ ಸಮಯದಲ್ಲಿಯೇ ಯಾವುದೇ ದಿನಾಂಕ ನಮೂದಿಸದೇ ರಾಜೀನಾಮೆ ಪತ್ರವನ್ನು ಪಡೆಯದೇಯಿರುವ ಬಗ್ಗೆ ಹಾಗೂ ಅಂತಹ ಪತ್ರವನ್ನು ನೀಡಬೇಕೆಂದು ಸಂಬಂಧಿಸಿದ ನೌಕರನನ್ನು ಒತ್ತಾಯಿಸದೇಯಿರುವ ಬಗ್ಗೆ ಮಾನ್ಯತೆ ನವೀಕರಿಸುವ ಸಕ್ಷಮ ಪ್ರಾಧಿಕಾರಗಳು ಖಚಿತಪಡಿಸಿಕೊಂಡಿದ್ದಾರೆಯೇ? | <br><br><br><br><br><br><br>----------------------------<br><br><br><br>----------------------------<br><br><br><br><br>---------------------------- |